**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ10042/2021**

ಪಿಡಬ್ಲೂ–4

ಸಿಡಬ್ಲೂ– 5

| | | |
|---|---|---|
| ಸಾಕ್ಷಿ ಹೆಸರು | – | ಪ್ರಹ್ಲಾದಪ್ಪ |
| ತಂದೆ ಹೆಸರು | – | ಧರ್ಮಪ್ಪ |
| ವಯಸ್ಸು | – | 57 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸಃ | – | ಲಕ್ಕವಳ್ಳಿ, ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 18–07–2024**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ನನಗೆ ಫ್ರಾ ಸಾ –1, ಫ್ರಾ ಸಾ 2, ಚಾಸಾ6 ರಿಂದ ಚಾಸಾ13 ರವರ ಪರಿಚಯ ಇದೆ. ಆರೋಪಿ ಗೊತ್ತು. ಫ್ರಾ ಸಾ –2 ಮತ್ತು ಆರೋಪಿಯ ನಡುವೆ ಗದ್ದೆಯಲ್ಲಿ ಓಡಾಡುವ ವಿಚಾರದಲ್ಲಿ ತಕರಾರು ಇರುತ್ತದೆ. ಈ ಬಗ್ಗೆ ಆರೋಪಿಯು ಫ್ರಾ ಸಾ –2 ರವರ ಮೇಲೆ ದ್ವೇಷ ಮಾಡುತ್ತಿದ್ದ.

ದಿನಾಂಕಃ18–05–2020 ರಂದು ನಾನು ಫ್ರಾ ಸಾ –1 ರವರ ಜಮೀನಿಗೆ ಕೆಲಸಕ್ಕೆ ಹೋಗಿದ್ದೆನು. ನನ್ನ ಜೊತೆಯಲ್ಲಿ ಚಾಸಾ 6 ರಿಂದ ಚಾಸಾ12 ರವರು ಸಹ ಫ್ರಾ ಸಾ –1 ರವರ ಜಮೀನಿನ ಕೆಲಸಕ್ಕೆ ಬಂದಿದ್ದರು. ನಾವೆಲ್ಲರೂ ಫ್ರಾ ಸಾ –1 ರವರ ಜಮೀನು ಸ.ನಂ. 6 ರಲ್ಲಿರುವ ಮೆಕ್ಕೆ ಜೋಳವನ್ನು ಮುರಿಯಲು ಹೋಗಿದ್ದೆವು. ಮೆಕ್ಕೆ ಜೋಳವನ್ನು ಮುರಿದು ಫ್ರಾ ಸಾ –1 ಟ್ರಾಕ್ಟರ್ ನಲ್ಲಿ ಮೆಕ್ಕೆ ಜೋಳವನ್ನು ಹೇರಿಕೊಂಡು ಬರುತ್ತಿದ್ದೆವು. ಸದರಿ ಟ್ರಾಕ್ಟರ್ ನಲ್ಲಿ ಫ್ರಾ ಸಾ –1, ಫ್ರಾ ಸಾ –2 , ನಾನು ಮತ್ತು ಚಾಸಾ–13 ರವರು ಬರುತ್ತಿದ್ದೆವು. ಟ್ರಾಕ್ಟರ್ ನ್ನು ಫ್ರಾ ಸಾ –2 ರವರು ಚಲಾಯಿಸುತ್ತಿದ್ದರು. ಸದರಿ ಟ್ರಾಕ್ಟರ್ ಫ್ರಾ ಸಾ –1 ರವರ ಗದ್ದೆಯಿಂದ ಆರೋಪಿಯ

ಗದ್ದೆಗೆ ಬಂದಾಗ ಆರೋಪಿಯು ನಮ್ಮ ಗದ್ದೆಯಲ್ಲಿ ಟ್ರಾಕ್ಟರ್ ನ್ನು ಓಡಿಸಬೇಡಿ ಎಂದು ಹೇಳಿದ್ದು ಆಗ ಪ್ರಾ ಸಾ –1 ರವರು ನಾನು ಟ್ರಾಕ್ಟರ್ ನ್ನು ಎಲ್ಲಿ ತೆಗೆದುಕೊಂಡು ಹೋಗಲಿ ಎಂದು ಹೇಳಿದ್ದು ಆಗ ಆರೋಪಿಯು ಒಂದು ದೊಣ್ಣೆಯನ್ನು ತೆಗೆದುಕೊಂಡು ಬಂದು ಪ್ರಾ ಸಾ –2 ರವರಿಗೆ ಜೋರಾಗಿ ಹೊಡೆದಿರುತ್ತಾನೆ. ಆ ಸಮಯದಲ್ಲಿ ಪ್ರಾ ಸಾ –2 ರವರು ಟ್ರಾಕ್ಟರ್ ನ್ನು ಇಳಿದು ಆರೋಪಿಯನ್ನು ಕೇಳಿರುತ್ತಾರೆ. ಆರೋಪಿಯು ಪ್ರಾ ಸಾ –2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ಹೊಡೆದಿರುತ್ತಾನೆ. ಆರೋಪಿಯು ಪ್ರಾ ಸಾ –2 ರವರನ್ನು ಯಾವ ಉದ್ದೇಶದಿಂದ ಹೊಡೆದಿದ್ದಾನೆ ಎಂದು ನನಗೆ ಗೊತ್ತಿಲ್ಲ ಆದರೆ ಬೈದಿರುತ್ತಾನೆ.

ಆಗ ಪ್ರಾ ಸಾ –2 ರವರು ಪ್ರಜ್ಞೆ ತಪ್ಪಿ ಬಿದ್ದಿರುತ್ತಾನೆ. ಆಗ ಟ್ರಾಕ್ಟರ್ನಲ್ಲಿದ್ದ ನಾವು ಪ್ರಾಸಾ 2 ರವರಿಗೆ ನೀರನ್ನು ಕುಡಿಸಿರುತ್ತೇವೆ. ಆಗ ನೀರು ಏರಲಿಲ್ಲ. ಪ್ರಾ ಸಾ –2 ರವರ ತಲೆಗೆ ಹೊಡೆದಿದ್ದರಿಂದ ಬಾವು ಬಂದಿರುತ್ತದೆ. ಆಗ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ6 ರಿಂದ ಚಾಸಾ12 ರವರು ಸ್ಥಳಕ್ಕೆ ಓಡಿ ಬಂದಿರುತ್ತಾರೆ. ಆಗ ಆರೋಪಿ ದೊಣ್ಣೆಯನ್ನು ಬಿಸಾಡಿ ಓಡಿ ಹೋದನು. ನಂತರ ಪ್ರಾ ಸಾ –2 ರವರನ್ನು ನಾನು , ಪ್ರಾ ಸಾ –1 , ಚಾಸಾ –13 ರವರು ಆನವಟ್ಟಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿ ಪ್ರಾ ಸಾ –2 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ –1 ಎಂದು ಗುರುತಿಸಲಾಗಿದೆ. ಆರೋಪಿ ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಆರೋಪಿ ಪ್ರಾ ಸಾ –2 ರವರನ್ನು ಉದ್ದೇಶಿಸಿ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಸಾಯಿಸಿಬಿಡುತ್ತೇನೆ ಎಂದು ಸಾಯಿಸುವ ಉದ್ದೇಶದಿಂದ ದೊಣ್ಣೆಯಿಂದ ತಲೆಗೆ ಹೊಡೆದಿರುತ್ತಾನೆ

ಎಂದರೆ ಹೌದು. ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಈ ವಿಚಾರವನ್ನು ಹೇಳಿರುತ್ತೇನೆ ಎಂದರೆ ಹೌದು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ಫ್ರಾ ಸಾ –2 ರವರ ಜಮೀನಿನ ಅಕ್ಕಪಕ್ಕ ನಮ್ಮ ಜಮೀನು ಇಲ್ಲ. ನಾನು ಕೂಲಿಗೆ ಹೋದ ಕಾರಣ ಅಕ್ಕಕ್ಕ ಯಾರ ಜಮೀನು ಬರುತ್ತದೆ ಎಂದು ನಾನು ನೋಡಿಲ್ಲ ಎಂದರೆ ಫ್ರಾ ಸಾ –1 ರವರ ಜಮೀನು ಹಾಗೂ ಆರೋಪಿಯ ಜಮೀನು ಅಕ್ಕಪಕ್ಕ ಇರುತತದೆ ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಫ್ರಾ ಸಾ –1 ರವರ ಜಮೀನಿನಲ್ಲಿ ನಾನು 5–6 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ .ಫ್ರಾ ಸಾ –1 ರವರು ಅವರ ಜಮೀನಿಗೆ ಕೆಲಸಕ್ಕೆ ಕರೆದಾಗ ನಾನು ಕೆಲಸಕ್ಕೆ ಹೋಗುತ್ತೇನೆ ಎಂದರೆ ಹೌದು. ನಾನು ಮತ್ತು ಫ್ರಾ ಸಾ –2 ರವರು ಚೆನ್ನಾಗಿದ್ದೇವೆ ಎಂದರೆ ಹೌದು. ನಾನು ಬೇಕಾದಂತಹ ಸಮಯದಲ್ಲಿ ಫ್ರಾ ಸಾ –1 ರವರಿಂದ ಹೆಚ್ಚಿನ ಹಣ ಪಡೆದು ನಂತರ ವಾಪಾಸ್ಸು ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಸದರಿ ದಿನ ಬೆಳಿಗ್ಗೆ 9–30 ಗಂಟೆಗೆ ಕೆಲಸಕ್ಕೆ ಹೋಗಿದ್ದೆನು. ಬೆಳಿಗ್ಗೆ ಹೋದರೆ ನಾವು ಸಂಜೆ 6–00 ಗಂಟೆ ವರೆಗೆ ಜಮೀನಿನಲ್ಲಿ ಕೆಲಸ ಮಾಡುತ್ತೇವೆ. ಜೋಳವನ್ನು ಮುರಿದು 2–3 ದಿನ ಆಗಿತ್ತು, ಮಳೆ ಬಂದಿತ್ತು. ಮುರಿದಂತಹ ಜೋಳವನ್ನು ಮಳೆ ನಿಂತ ಕಾರಣ ಜೋಳವನ್ನು ಟ್ರಾಕ್ಟರ್ಗೆ ತುಂಬಲು ಹೋಗಿದ್ದೆವು. ಮದ್ಯಾಹ್ನ 2–30 ಗಂಟೆ ಸಮಯದಲ್ಲಿ ಟ್ರಾಕ್ಟರ್ ಗೆ ಜೋಳ ವನ್ನು ತುಂಬಿಸಿರುತ್ತೇವೆ. ಒಟ್ಟು 8 ಜನ ಜೋಳವನ್ನು ಟ್ರಾಕ್ಟರಿಗೆ ತುಂಬಿಸಿರುತ್ತೇವೆ. ನಾವು ಟ್ರಾಕ್ಟರ್ ನಲ್ಲಿ ಸದರಿ ಜಮೀನಿಗೆ ಹೋಗಿರುತ್ತೇವೆ. ಆ ಸಮಯದಲ್ಲಿ ಮಳೆ ಬಂದು ಭೂಮಿ ಕೆಸರಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜೋಳ ಮುರಿದಿದ್ದು ಜೋಳದ ಬುಡಗಳು ಹಾಗೆ ಇದ್ದವು. ಇದೇ ರೀತಿ ಎಲ್ಲರ ಗದ್ದೆಯಲ್ಲಿಯೂ ಜೋಳ ಇದ್ದವು ಎಂದರೆ ಆರೋಪಿಯ ಗದ್ದೆಯಲ್ಲಿ ಜೋಳ ಮುರಿದು ನೆಲವನ್ನು ಸಮ ಮಾಡಿದ್ದರು. ಉಳಿದಂತಹ ಗದ್ದೆಗಳಲ್ಲಿ ಜೋಳದ ಗಿಡಗಳನ್ನು ಕ್ಲೀನ್ ಮಾಡಿದ್ದರು. ಫ್ರಾ ಸಾ –1 ರವರ ಜಮೀನಿನಲ್ಲಿ ಮಾತ್ರ ಜೋಳ ಉಳಿದಿತ್ತು. ಜೋಳ ಹಾಕುವ ಸಮಯದಲ್ಲಿ ಜೋಳದ ಗಿಡದ ಲೈನ್ ಒಂದು ಕಡೆಗೆ ಏರು ಇದ್ದು ಆ ಕಡೆ ಈಕಡೆ ತಗ್ಗು ಇರುತ್ತದೆ ಎಂದರೆ ಹೌದು. ಜೋಳ ಹಾಕಿದ ಜಾಗದಲ್ಲಿ ರಸ್ತೆ ಮಾಡಿ ಕ್ಲೀನ್ ಮಾಡಿರಲಿಲ್ಲ ಅದೇ ಜೋಳದ ಗದ್ದೆಯಲ್ಲೇ ಟ್ರಾಕ್ಟರ್ ತೆಗೆದುಕೊಂಡು ಹೋಗುತ್ತಿದ್ದೆವು

ಎಂದರೆ ಹೌದು. ಜೋಳವನ್ನು ಚೀಲದಲ್ಲಿ ತುಂಬಿರಲಿಲ್ಲ ಹಾಗೆ ಟ್ರಾಕ್ಟರ್ ನ ಬಾಡಿ ಲೆಕ್ಕದಲ್ಲಿ ಜೋಳವನ್ನು ತುಂಬಿದ್ದೆವು. ಟ್ರಾಕ್ಟರ್ ನಲ್ಲಿ ಆ ದಿನ ನಾನು , ಪ್ರಾ ಸಾ –1 , ಪ್ರಾ ಸಾ 2 ಮತ್ತು ಚಾಸಾ 13 ರವರು ಕೂತಿದ್ದೆವು. ಟ್ರಾಕ್ಟರ್ ನಲ್ಲಿ ಜೋಳ ತುಂಬಿಸಿದ್ದರಿಂದ ಹಿಂಬದಿ ಟ್ರೈಲರ್ ರಸ್ತೆಯ ಏರಿನಲ್ಲಿ ಆ ಕಡೆ ಈ ಕಡೆ ವಾಲಾಡುತ್ತದೆ ಎಂದರೆ ಹೌದು.

ಆರೋಪಿಯನ್ನು ನಾನು 20 ಅಡಿ ದೂರದಿಂದ ನೋಡಿರುತ್ತೇನೆ. ನಾವು ಟ್ರಾಕ್ಟರ್ಗೆ ಜೋಳವನ್ನು ತುಂಬಿಕೊಂಡು ಬರುವಾಗ ಆರೋಪಿ ಗದ್ದೆಯಲ್ಲಿ ಇದ್ದನು. ಆರೋಪಿ ಆ ಸಮಯದಲ್ಲಿ ಅವರ ಗದ್ದೆಯಲ್ಲಿ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿಯ ಕೈಯ್ಯಲ್ಲಿ ಹಾರೇಕೋಲು, ಕತ್ತಿ ಇರಲಿಲ್ಲ. ಆರೋಪಿಯು ಪ್ರಾ ಸಾ –1 ಮತ್ತು ಪ್ರಾ ಸಾ –2 ರವರಿಗೆ ಟ್ರಾಕ್ಟರ್ ನ್ನು ನಿಲ್ಲಿಸಿಕೊಂಡು ಬೈಯ್ಯುತ್ತಿದ್ದನು. ಆರೋಪಿ ಟ್ರಾಕ್ಟರ್ ಹತ್ತಿರ ಬರುವಾಗ ಬೈಯುತ್ತಾ ಬಂದಿರುತ್ತಾನೆ. ಆರೋಪಿ ಬೈಯ್ದುಕೊಂಡು ಬರುತ್ತಿರುವಾಗ ನಾನು ಹೋಗಿ ಆರೋಪಿಯನ್ನು ತಡೆಯಲಿಲ್ಲ. ಆ ಸಮಯದಲ್ಲಿ ಟ್ರಾಕ್ಟರ್ ನಲ್ಲಿ ಕೂತವರು ಆರೋಪಿ ಬೈಯುವುದನ್ನು ಕೇಳಲಿಲ್ಲ ಮತ್ತು ತಡೆಯಲಿಲ್ಲ. ಪ್ರಾ ಸಾ –2 ರವರು ಟ್ರಾಕ್ಟರ್ ಇಳಿದು 5 ಅಡಿ ದೂರ ಹೋಗಿದ್ದರು. ಆರೋಪಿಯು ಪ್ರಾ ಸಾ –2 ರವರು ಇಳಿದು ಹೋದ ನಂತರ ಕಾಲು ಗಂಟೆಯ ಒಳಗೆ ಬೈದಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿಯ ಕೈಯಲ್ಲಿ ಯಾವುದೇ ದೊಣ್ಣೆ ಇರಲಿಲ್ಲ. ಆ ಸಮಯದಲ್ಲಿ ಮು ಮಾ –1 ಎಲ್ಲಿ ಬಿದ್ದಿತ್ತು ಎಂದು ನನಗೆ ಗೊತ್ತಿಲ್ಲ. ಮು ಮಾ –1 ನ್ನು ಯಾರು ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ.

ಪ್ರಾ ಸಾ –1 ರವರು ಆರೋಪಿಗೆ ಯಾಕೆ ಬೈಯುತ್ತೀಯಾ ಎಂದು ಆರೋಪಿಯನ್ನು ಕೇಳಲಿಲ್ಲ. ಟ್ರಾಕ್ಟರ್ ಮತ್ತು ಟ್ರೈಲರ್ ಮಧ್ಯ ಒಂದು ಕೊಂಡಿ ಇರುತ್ತದೆ ಎಂದರೆ ಹೌದು. ಮಳೆಗಾಲದಲ್ಲಿ ಗದ್ದೆಯಲ್ಲಿ ತೇವಾಂಶ ಇದ್ದಾಗ ಭಾರ ಇರುವ ಗಾಡಿ ಗದ್ದೆಯಲ್ಲಿ ಹೂತುಕೊಳ್ಳುತ್ತದೆ ಎಂದರೆ ಹೌದು. ಸಾಮಾನ್ಯವಾಗಿ ಆ ಸಮಯದಲ್ಲಿ ಜೋರಾಗಿ ಓಡಿಸಿದಾಗ ಟ್ರೈಲರ್ ನ ಮುಂಭಾಗದ ಸಣ್ಣ ಚಕ್ರಗಳು ಮೇಲೆ ಏಳುತ್ತವೆ ಎಂದರೆ ಹೌದು ಮುಂಭಾಗದ ಚಕ್ರಗಳು ಮೇಲೆ ಎದ್ದರೆ ಗಾಡಿ ಪಲ್ಟಿ ಆಗುತತದೆ ಎಂದರೆ ಹೌದು. ಈ ರೀತಿ ಪಲ್ಟಿ ಆದಾಗ ಟ್ರಾಕ್ಟರ್ ನ ಚಾಲಕ ಮಧ್ಯ ಬರುವ ಕೊಂಡಿಯ ಮೇಲೆ ಬೀಳುವ ಸಾಧ್ಯತೆ ಇದೆ ಎಂದರೆ ಹೌದು. ಆರೋಪಿಯು ಪ್ರಾ ಸಾ –1 ರವರ ಮನೆಗೆ ಕೆಲಸಕ್ಕೆ ಬರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿ

4 ವರ್ಷದವನಿದ್ದಾಗಿನಿಂದಲೂ ಫ್ರಾ ಸಾ –1 ರವರ ಮನೆಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ನಾನು ನೋಡಿಲ್ಲ. ಆರೋಪಿ ಮತ್ತು ಫ್ರಾ ಸಾ –1 ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ಆರೋಪಿ ಸಣ್ಣವನಿದ್ದಾಗಿನಿಂದಲೂ ನೋಡಿರುತ್ತೇನೆ. ಆರೋಪಿ ಸಣ್ಣವನಿದ್ದಾಗ ಬೈಕ್ ಅಪಘಾತ ಆಗಿ ಆರೋಪಿಯ ಕಾಲಿಗೆ ಪೆಟ್ಟಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಕಾಲಿಗೆ ಪೆಟ್ಟಾಗಿದ್ದರಿಂದ ಆತ ಈಗಲೂ ಕುಂಟಿಕೊಂಡು ನಡೆಯುತ್ತಾನೆ ಎಂದರೆ ಹೌದು. ಆರೋಪಿಯು ಫ್ರಾ ಸಾ –1 ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗಿದ್ದು ಕೂಲಿ ಹಣ ಕೇಳಿದಾಗ ಕೊಡದಿದ್ದ ಕಾರಣ ಅವರ ನಡುವೆ ವೈಮನಸ್ಸು ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಗದ್ದೆಯಲ್ಲಿರುವ ಗೂಟಕ್ಕೆ ಯಾರೂ ಮೊಳೆ ಹೊಡೆಯುವುದಿಲ್ಲ ಎಂದರೆ ಹೌದು. ಮು ಮಾ –1 ಕ್ಕೆ ಸಿಮೆಂಟ್ ನ ಅಂಶ ಅಂಟಿಕೊಂಡಿದೆ ಎಂದರೆ ಹೌದು. ಮು ಮಾ –1 ನ್ನು ಸೆಂಟ್ರಿಂಗ್ ಗೆ ಬಳಸುತ್ತಾರೆ ಎಂದರೆ ಹೌದು. ಮು ಮಾ –1 ನ್ನು ನಾನು ಈ ದಿನ ನೋಡುತ್ತಿದ್ದೇನೆ ಎಂದರೆ ಹೌದು. ಫ್ರಾ ಸಾ–2 ರವರಿಗೆ ಪೆಟ್ಟಾದ ನಂತರ ನಾನು ಫ್ರಾ ಸಾ –2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಫ್ರಾ ಸಾ –2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ದಿನ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ದಿಃ18–05–2020 ರಂದು ಪೋಲೀಸರು ಸಂಜೆ 6–30 ಗಂಟೆಗೆ ಬಂದು ಯಾರು ಯಾರು ಇದ್ದಿರಿ ಠಾಣೆಗೆ ಬರಬೇಕು ಎಂದು ತಿಳಿಸಿಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಅರ್ಧ ಗಂಟೆ ಇದ್ದೆನು. ದಿಃ19–05–2020 ರಂದು ಮಧ್ಯಾಹ್ನ 3–30 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿದ್ದೆನು. ನನ್ನ ಹೇಳಿಕೆಯಲ್ಲಿ ಪೋಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಇಂದು ನಾನು, ಫ್ರಾ ಸಾ –2 ರವರ ಸ್ವಂತ ವಾಹನದಲ್ಲಿ ಅವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಹೌದು. ಫ್ರಾ ಸಾ –2 ರವರು ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿದ್ದಾರೆ ಎಂದರೆ ನಾನು ಕಣ್ಣಾರೆ ನೋಡಿದ್ದನ್ನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ದಿನ ಗಲಾಟೆ ಆಯಿತು ನಾನು ಜೋಳ ತುಂಬಲು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿಯು ಬಂದು ಫ್ರಾ ಸಾ 2 ರವರಿಗೆ ಹೊಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಸದರಿ ದಿನ ನಾನು ಆಸ್ಪತ್ರೆಗೆ ಫ್ರಾ ಸಾ –2 ರವರನ್ನು ಕರೆದುಕೊಂಡು ಹೋಗಿದ್ದು ನಂತರ

ಪೋಲೀಸರ ಮುಂದೆ ನನ್ನ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಫ್ರಾ ಸಾ –2 ರವರು ಟ್ರಾಕ್ಟರ್ ಓಡಿಸಲು ಡಿ ಎಲ್ ಪಡೆದಿಲ್ಲ ಎಂದರೆ ಸರಿಯಲ್ಲ. ಫ್ರಾ ಸಾ –2 ರವರಿಗೆ ಸರಿಯಾಗಿ ಟ್ರಾಕ್ಟರ್ ಓಡಿಸಲು ಬರುವುದಿಲ್ಲ ಅವರೇ ಟ್ರಾಕ್ಟರ್ ಓಡಿಸಿಕೊಂಡು ಹೋಗಿ ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಫ್ರಾ ಸಾ –1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).